O.S.No.453/2013
DW -1

ದಿನಾಂಕ 26/02/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

**<u>ಪಾಟೀ ಸವಾಲು:- ಶ್ರೀ ಎಸ್.ಆರ್.ಆರ್. ವಾದಿ ಪರ ವಕೀಲರಿಂದ</u>**

ಈ ದಾವೆಯ ವಿಚಾರ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ಪುರವಾರ ಗ್ರಾಮದ ಸರ್ವೆ ನಂ- 123/3 ವಿಸ್ತೀರ್ಣ 3 ಗುಂಟೆ ಜಾಗವನ್ನು ನಾನು ನೋಡಿರುತ್ತೇನೆ. ಸದರಿ 3 ಗುಂಟೆ ಜಾಗ ವೆಂಕಟಲಕ್ಷ್ಮಮ್ಮ ಮತ್ತು ಅವರ ಗಂಡನಿಗೆ ಸೇರಿತ್ತು ಎಂದರೆ ಸರಿ. ವೆಂಕಟಲಕ್ಷ್ಮಮ್ಮ ರವರು ಸದರಿ 3 ಗುಂಟೆ ಆಸ್ತಿಯನ್ನು 1991-92 ರಲ್ಲಿ ಭೂಪರಿವರ್ತನೆ ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ನಳಿನಾ ಕಡೆಯಿಂದ ನಾವು ಖರೀದಿಸಿದ್ದು ಮಾತ್ರ ನನಗೆ ಗೊತ್ತು ಎಂದು ಉತ್ತರಿಸಿರುತ್ತಾರೆ . ನಳಿನಾ ಇವರು ವೆಂಕಟಲಕ್ಷ್ಮಮ್ಮ ರವರ ಕಡೆಯಿಂದ ಖರೀದಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ಆಸ್ತಿ ವೆಂಕಟಲಕ್ಷ್ಮಮ್ಮ ರವರಿಗೆ ಹೇಗೆ ಬಂದಿರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ.

2. ವೆಂಕಟಲಕ್ಷ್ಮಮ್ಮ ರವರು ಸದರಿ ಆಸ್ತಿಯಲ್ಲಿ ಎಷ್ಟು ನಿವೇಶನ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾವು ಖರೀದಿಸಿದ ನಿವೇಶನ ಹೊರತುಪಡಿಸಿ ಬೇರೆ ನಿವೇಶನಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವೆಂಕಟಲಕ್ಷ್ಮಮ್ಮ ರವರಿಗೆ ಎಷ್ಟು ಆಸ್ತಿ ಇತ್ತು ಮತ್ತು ಎಷ್ಟು ನಿವೇಶನ ಮಾಡಿಸಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನಳಿನಾ ರವರಿಂದ ಖರೀದಿಸುವ ಕಾಲಕ್ಕೆ ನಾವು ವೆಂಕಟಲಕ್ಷ್ಮಮ್ಮ ರವರು ಎಷ್ಟು ನಿವೇಶನ ಮಾಡಿಸಿರುತ್ತಾರೆಂದು ಕೇಳಿ ತಿಳಿದುಕೊಂಡಿರುವುದಿಲ್ಲ ಎಂದರೆ ಸರಿ. ಸರ್ವೆ ನಂ-123/3 ರಲ್ಲಿ ವೆಂಕಟಲಕ್ಷ್ಮಮ್ಮ ರವರು ಎಷ್ಟು ನಿವೇಶನ ಮಾಡಿದ್ದರು ಮತ್ತು ಪಂಚಾಯಿತಿಯವರು ಖಾತೆ ನೀಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. 1991-92 ನೇ ಸಾಲಿನಲ್ಲಿ ನನಗೆ 25 ವರ್ಷ ವಯಸ್ಸು ಇತ್ತು ಎಂದರೆ ಸರಿ. ದಾವಾ ಆಸ್ತಿ ಪುರವಾರ – ಮಧುಗಿರಿ ಮುಖ್ಯ ರಸ್ತೆಯಲ್ಲಿ ಬರುತ್ತದೆ ಎಂದರೆ ಸರಿ. ಪೂ.ಐ.ಡಿ ಹಳ್ಳಿ ಪುರವಾರ ರಸ್ತೆ ಇರುತ್ತದೆ ಎಂದರೆ ಸರಿ. ನನಗೆ ಬುದ್ದಿಬಂದಾಗಿನಿಂದ ಸದರಿ ಜಾಗವನ್ನು ಪ್ರತಿದಿನ ನೋಡುತ್ತಾ ಇರುತ್ತೇನೆ ಎಂದರೆ ಸರಿ.

3. 1991-92 ರಲ್ಲಿ  ವೆಂಕಟಲಕ್ಷ್ಮಮ್ಮ ರವರು 3 ಗುಂಟೆ ಜಾಗವನ್ನು ಪೂ-ಪ-93.6 ಮತ್ತು ಉ-ದ-26 ಅಡಿ ಮಾಡಿರುತ್ತಾರೆ ಎಂದರೆ ಸರಿ. ಪೂ-ಪ-93.6 ಇಂಟು 26 ಅಡಿ ಜಾಗವನ್ನು ಪಶ್ಚಿಮದ ಕಡೆಯಿಂದ 6 ನಿವೇಶಗಳನ್ನಾಗಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.  ಪಶ್ಚಿಮದ ಕಡೆ 14 ಇಂಟು 26.6 ಅಡಿ ಜಾಗವನ್ನು ವೆಂಕಟಲಕ್ಷ್ಮಮ್ಮ ರವರು 1992 ರಲ್ಲಿ ವೈ. ತಿಮ್ಮಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಂತರ ವೈ.ತಿಮ್ಮಪ್ಪ ರವರು 2010 ರಲ್ಲಿ ಮಹದೇವ ಹೆಚ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ, ಸದರಿ ಮಹದೇವ್ ಇವರು ಅಂಗಡಿ ನಡೆಸುತ್ತಾ ಇರುತ್ತಾರೆ ಎಂದರೆ ಸರಿ. ಮಹದೇವ್ ರವರ ನಿವೇಶನದ ಪಕ್ಕ 11.6 ಇಂಟು 28 ಅಡಿ ಜಾಗವನ್ನು ವೆಂಕಟಲಕ್ಷ್ಮಮ್ಮ  ರವರು ನಾಗರತ್ನಮ್ಮ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಮಹದೇವಪ್ಪ ರವರ ಪಕ್ಕ ಇರುವ ಲಕ್ಷ್ಮೀಪತಿ ರವರನ್ನು ನೋಡಿರುತ್ತೇನೆ, ಸದರಿ ಲಕ್ಷ್ಮಿಪತಿ ಇವರು ಈಶ್ವರಯ್ಯ ರವರ ಕಡೆಯಿಂದ ಖರೀದಿಸಿರುತ್ತಾರೆ ಎಂದರೆ ಸರಿ.

4. ಈಶ್ವರಯ್ಯ ರವರು ನಾಗರತ್ನಮ್ಮ ರವರ ಕಡೆಯಿಂದ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಲಕ್ಷ್ಮಿಪತಿ ರವರ ಅಂಗಡಿ ಪಕ್ಕದಲ್ಲಿ 15 ಇಂಟು 26 ಅಡಿ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ರಾಮಚಂದ್ರಶೆಟ್ಟಿ ರವರ ಪಕ್ಕದ ಉ-23 ವರೆ ಅಡಿ , ದ-14 ಅಡಿ ಉ-ದ-26 ಅಡಿಯನ್ನು ನಳಿನಾ ಇವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನಳಿನಾ ರವರ ನಿವೇಶನ ಸಂಖ್ಯೆ-5 ಎಂದರೆ ಸಾಕ್ಷಿ ನಿವೇಶನ ನಂ-1 ಎಂದು ಉತ್ತರಿಸಿರುತ್ತಾರೆ. ನಳಿನಾ ನಿವೇಶನದ ಪೂರ್ವಕ್ಕೆ ಪೂ-ಪ-23 ಅಡಿ , ಉ-ದ-14 ಅಡಿ ನಿವೇಶನ ಇರುತ್ತದೆ ಎಂದರೆ ಸರಿಯಲ್ಲ. ಆದಾದ ನಂತರ ಐ.ಡಿ.ಹಳ್ಳಿ - ಪುರವಾರ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ನಿವೇಶನಕ್ಕೆ ಹೊಂದಿಕೊಂಡಂತೆ ವಾದಿಯ ನಿವೇಶನ ಇರುತ್ತದೆ ಎಂದರೆ ಸರಿಯಲ್ಲ. ಸದರಿ ನಿವೇಶನ ನಂ-6 ಎಂದು ಇರುತ್ತದೆ ಎಂದರೆ ಸರಿಯಲ್ಲ. ಅದರ ಖಾತೆ ನಂ-323 ಇರುತ್ತದೆ  ಎಂದರೆ ಸರಿಯಲ್ಲ. ನಮ್ಮ ನಿವೇಶನದ ಖಾತೆ ನಂ-223/1 ಇರುತ್ತದೆ.

5. ವೆಂಕಟಲಕ್ಷ್ಮಮ್ಮ ರವರ ಒಟ್ಟು ಜಾಗ ಪೂರ್ವದಿಂದ ಪಶ್ಚಿಮಕ್ಕೆ 93.6 ಅಡಿ ಇರುತ್ತದೆ ಎಂದರೆ ಸಾಕ್ಷಿ ನಾನು ಅಳತೆ ಮಾಡಿಲ್ಲ ಎಂದು ಉತ್ತರಿಸಿರುತ್ತಾರೆ. ಈ ದಾವೆ ಹೂಡಿದ ನಂತರ ಎಷ್ಟು ನಿವೇಶನಗಳು ಮಾಡಿರುತ್ತಾರೆ ಮತ್ತು ಯಾರು ಯಾರಿಗೆ ಮಾರಾಟ ಮಾಡಿರುತ್ತಾರೆಂದು ನಾನು ತಿಳಿದುಕೊಂಡಿರುವುದಿಲ್ಲ. ನರಸಿಂಹಪ್ಪನ ಮಗ ಹನುಮಂತರಾಯಪ್ಪ ರವರನ್ನು ನೋಡಿರುತ್ತೇನೆ. ಹನುಮಂತರಾಯಪ್ಪ ರವರು ಪೂ-ಪ-22 ಅಡಿ ಉ-ದ-26 ಅಡಿಯಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಪೂ-ರಸ್ತೆ, ಪ-ನಳಿನಾ ರವರ ನಿವೇಶನ, ಉ-ಪಂಚಾಯಿತಿ ಕಟ್ಟಡ ಮತ್ತು ದ-ರಸ್ತೆ ಈ ನಿವೇಶನ ಇರುವುದಿಲ್ಲ. ಈ ಚಕ್ಕುಬಂದಿ ನಿವೇಶನವನ್ನು ದಿ.06/07/2002 ರಂದು ಹನುಮಂತರಾಯಪ್ಪ ರವರು ವೆಂಕಟಲಕ್ಷ್ಮಮ್ಮ ರವರ ಕಡೆಯಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಖರೀದಿಸಿದಾಗಿನಿಂದಲೂ ಹನುಮಂತರಾಯಪ್ಪ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ.

6. ಹನುಮಂತರಾಯಪ್ಪ ರವರು ದಿ. 06/09/2006 ರಂದು ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2006 ರಿಂದಲೂ ವಾದಿ ಪೂ-ಪ-22 ಅಡಿ ಉ-ದ-26 ಅಡಿ ಜಾಗವನ್ನು ಖಾತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಾಖಲೆ ಸೃಷ್ಟಿ ಮಾಡಿರುತ್ತಾರೆಂದು ಉತ್ತರಿಸಿರುತ್ತಾರೆ. ನಮ್ಮ ಕ್ರಯ ಪತ್ರದಲ್ಲಿ ಪೂ - ಐ.ಡಿ. ಹಳ್ಳಿ - ಪುರವಾರ ರಸ್ತೆ , ಪ-ರಾಮಶೆಟ್ಟಿ ರವರ ನಿವೇಶನ , ಉ-ಶಾಲಾ ಕಾಂಪೌಂಡ್ ಮತ್ತು ಗ್ರಾಮಪಂಚಾಯಿತಿ ಮಳಿಗೆ, ದ-ಮಲ್ಲಮ್ಮನ ನಿವೇಶನ ಇರುತ್ತದೆ. ನಮ್ಮ ನಿವೇಶನ ಅಳತೆ ಪೂ-ಪ-ಉ-23 ಅಡಿ, ದ-16 ಅಡಿ ಮತ್ತು ಉತ್ತರ-ದಕ್ಷಿಣ 17 ಅಡಿ ಇರುತ್ತದೆ. ನಳಿನಾ ನಿವೇಶನದ ಪಶ್ಚಿಮಕ್ಕೆ ರಾಮಶೆಟ್ಟಿ ರವರ ನಿವೇಶನ ಬರುತ್ತದೆ ಎಂದರೆ ಸರಿ, ರಾಮಶೆಟ್ಟಿ ನಿವೇಶನದ ಪೂರ್ವ ಭಾಗದ ಕೊನೆಯಿಂದ ಉತ್ತರದ ಕಡೆ 55 ಅಡಿ, ದಕ್ಷಿಣದ ಕಡೆ 56 ಅಡಿ ಇರುತ್ತದೆ ಎಂದರೆ ಸರಿಯಲ್ಲ. ಅಷ್ಟು ಜಾಗದಲ್ಲಿ ನಿವೇಶನ ನಂ-5 ಮತ್ತು 5 ಇರುತ್ತದೆ ಎಂದರೆ ಸರಿಯಲ್ಲ.

7. ನಳಿನಾ ಖರೀದಿಸುವ ಕಾಲಕ್ಕೆ ಉತ್ತರದ ಕಡೆ 23 ಅಡಿ , ದ-14 ಅಡಿ ಮತ್ತು ಉ-ದ-26 ಅಡಿ ಮಾತ್ರ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ . ನಳಿನಾ ರವರು ಉದ್ದೇಶಪೂರ್ವಕವಾಗಿ ಪೂರ್ವಕ್ಕೆ ನಿವೇಶನ ಸಂಖ್ಯೆ-6 ಎಂದು ಬರೆಯುವ ಬದಲಾಗಿ ರಸ್ತೆ ಎಂದು ಬರೆಸಿರುತ್ತಾರೆ ಎಂದರೆ ಸರಿಯಲ್ಲ. ನಳಿನಾ ರವರ ಕ್ರಯ ಪತ್ರದಲ್ಲಿ ಪೂರ್ವಕ್ಕೆ ರಸ್ತೆ ಇರುವುದರಿಂದ ನಾವು ಸಹ ನಮ್ಮ ಕ್ರಯ ಪತ್ರದಲ್ಲಿ ಪೂರ್ವಕ್ಕೆ ರಸ್ತೆ ಎಂದು ನಮೂದು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ ಚಕ್ಕುಬಂದಿ ತಪ್ಪಾಗಿ ನಮೂದಿಸಿದ್ದು ನಿವೇಶನ ಸಂಖ್ಯೆ6 ಸಹ ನಮ್ಮದು ಎಂದು ಕೇಳುತ್ತಾ ಇದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಪಕ್ಕಕ್ಕೆ ಯಾವುದೇ ನಿವೇಶನ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ನಮ್ಮ ನಿವೇಶನದ ಅಳತೆ ಬಿಟ್ಟು ಪೂರ್ವದ ಕಡೆ ಜಾಗ ಇದ್ದರೆ ನನ್ನದು ಯಾವುದೇ ಅಭ್ಯಂತರ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅಲ್ಲಿ ರಸ್ತೆ ಇರುತ್ತದೆ ಎಂದು ಉತ್ತರಿಸಿರುತ್ತಾರೆ.

8. ಮೂಲ ದಾವೆ ಸಂಖ್ಯೆ-272/2003 ರಲ್ಲಿ ವಾದಿ ಪಕ್ಷಗಾರರು ಇರಲಿಲ್ಲಿ ಎಂದರೆ ಸರಿ. ಅಸಲು ದಾವಾ ಸಂಖ್ಯೆ-151/2002 ರಲ್ಲಿ ವಾದಿ ಮತ್ತು ಹನುಮಂತರಾಯಪ್ಪ ಪಕ್ಷಗಾರರು ಇರಲಿಲ್ಲ ಎಂದರೆ ಸರಿ. ಅಸಲು ದಾವಾ ಸಂಖೆ-176/2006 ರ ದಾವೆಯ ವಿಚಾರ ನನಗೆ ಗೊತ್ತಿರುತ್ತದೆ. ಸದರಿ ದಾವೆ ನಿವೇಶನ ನಂ-5 ಖಾತೆ ನಂ- 233/1 ಕ್ಕೆ ಸಂಬಂಧಿಸಿದ್ದು ಎಂದರೆ ಸರಿ. ದಾವಾ ಆಸ್ತಿ ಬಗ್ಗೆ ನಳಿನಾ ರವರು ಹೂಡಿದ ದಾವೆಯಲ್ಲಿ ಸೇರಿಸಿರಲಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿಸಿದ ವಿಸ್ತೀರ್ಣ ಆಕೆ ದಾವೆ ಹೂಡಿದ್ದರು ಎಂದರೆ ಸರಿ. ಕ್ರಯ ಪತ್ರದಲ್ಲಿ ರಸ್ತೆ ಇದ್ದ ಕಾರಣ ನಳಿನಾ ರವರು ಸದರಿ ದಾವೆಯಲ್ಲಿ ರಸ್ತೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಮತ್ತು ನಳಿನಾ ರವರಿಗೆ ಆಗಲೀ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

9. ಪೂ-ರಸ್ತೆ, ಪ-ನಮ್ಮಗಳ ನಿವೇಶನ, ಉ-ಪಂಚಾಯಿತಿ ಜಮೀನು ಮತ್ತು ದ-ರಸ್ತೆ ಈ ಮಧ್ಯೆದಲ್ಲಿನ ಚಕ್ಕುಬಂದಿಯಲ್ಲಿನ ಆಸ್ತಿಯನ್ನು ನಮಗೆ ಮಾರಾಟ ಮಾಡಿರುವುದಿಲ್ಲ ಮತ್ತು ಸ್ವಾಧೀನ ಬಿಟ್ಟುಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಮೇಲೆ ಹೇಳಿದ ಆಸ್ತಿ ಇರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿ ವಾದಿ ಸ್ವಾಧೀನದಲ್ಲಿರುತ್ತದೆ ಎಂದರೆ ಸರಿಯಲ್ಲ. ವೆಂಕಟಲಕ್ಷ್ಮಮ್ಮ ರವರ ಪೂರ ಜಾಗವನ್ನು ಅಳತೆ ಮಾಡಿಸಲು ನನ್ನ ತಕರಾರು ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ.